## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪಾವಗಡ.

ಮೂಲ ದಾವಾ **.ಸಂಖ್ಯೆ ಃ 33 ಃ 2008**

ವಾದಿಃ ಆಂಜನೇಯಲು ಪ್ರತಿವಾದಿಃ ಎಸ್.ಟಿ.ನಾಗರಾಜು ಮತ್ತು ಇತರರು

**ವಾದಿ ಸಲ್ಲಿಸಿರುವ ಮದ್ಯಂತರ ಅರ್ಜಿ 8 ಆದೇಶ 1 ನಿಯಮ 10(2) ಸಿಪಿಸಿ ಅಡಿಯಲ್ಲಿನ ಅರ್ಜಿಯ ಮೇಲಿನ ಆದೇಶ.**

ವಾದಿ ಪರ ವಕೀಲರು ಈ ಅರ್ಜಿ ಸಲ್ಲಿಸಿ ಜಯರಾಮಪ್ಪ ಎನ್ನುವವರನ್ನು ದಾವೆಯಲ್ಲಿ ಓರ್ವ ಪ್ರತಿವಾದಿಯನ್ನಾಗಿ ಸೇರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

ಅರ್ಜಿಗೆ ಪೂರಕವಾಗಿ ವಾದಿ ಪ್ರಮಾಣ ಪತ್ರ ಸಲ್ಲಿಸಿ ನಿಯೋಜಿತ ಪ್ರತಿವಾದಿ ದಾವಾ ಸ್ವತ್ತನ್ನು ದಾವೆ ಸಲ್ಲಿಸಿದ ನಂತರ ಖರೀದಿಸಿದಂತಹ ಖರೀದಿದಾರಾಗಿದ್ದು ಅವರು ಈ ದಾವೆಯಲ್ಲಿ ಅವಶ್ಯಕ ಹಾಗೂ ಸೂಕ್ತವಾದ ಪ್ರತಿವಾದಿಯಾಗಿರುತ್ತಾರೆ. ಐದನೇ ಪ್ರತಿವಾದಿ ದಾಸರಿ ಹನುಮಂತರಾಜುರವರಿಗೆ ಹಾಗೂ ದಾಸರಿ ಹನುಮಂತರಾಯಪ್ಪ ಸುಬ್ಬರಾಯರವರಿಗೆ ಅಸ್ತಿಯನ್ನು ಮಾರಿದ್ದು ನಂತರ ನಿಯೋಜಿತ ಪ್ರತಿವಾದಿ ಸದರಿ ಅಸ್ತಿಯನ್ನು ಖರೀದಿಸಿದ್ದಾರೆ. ಸದರಿ ನಿಯೋಜಿತ ಪ್ರತಿವಾದಿಯ ಹಾಜರಾತಿ ಈ ದಾವೆಯಲ್ಲಿ ಸೂಕ್ತವಾಗಿದ್ದು ಅದ್ದರಿಂದ ವಾದಿಗೆ ನಿಯೋಜಿತ ಪ್ರತಿವಾದಿಯನ್ನು ಓರ್ವ ಪಕ್ಷಗಾರನಾಗಿ ಈ ದಾವೆಯಲ್ಲಿ ಸೇರಿಸಲು ಅನುಮತಿ ನೀಡುವಂತೆ ಪ್ರಾರ್ಥಿಸಿರುತ್ತಾರೆ.

ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ತಿಳುವಳಿಕೆಯನ್ನು ನಿಯೋಜಿತ ಪ್ರತಿವಾದಿಗೆ ಕಳುಹಿಸಿದ್ದು ಸದರಿ ನಿಯೋಜಿತ ಪ್ರತಿವಾದಿ ತನ್ನ ವಕೀಲರ ಮುಖಾಂತರ ನ್ಯಾಯೂಲಯಕ್ಕೆ ಹಾಜರಾಗಿ ಅರ್ಜಿಗೆ ತಕರಾರು ಸಲ್ಲಿಸಿದ್ದು ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣವಿರುವುದಿಲ್ಲ ನಿಯೋಜಿತ ಪ್ರತಿವಾದಿ ದಾವಾಸ್ವತ್ತಿನ ನ್ಯಾಯಾಬದ್ದ ಖರೀದಿದಾರರಾಗಿದ್ದು ತಾವು ಈ ದಾವೆಯಲ್ಲಿ ಸೂಕ್ತ ಮತ್ತು ಅವಶ್ಯಕ ಪಕ್ಷಗಾರರಾಗಿದ್ದೇವೆಂದು ತಕರಾರು ಸಲ್ಲಿಸಿದ್ದಾರೆ.

**ವಾದಿಯ ವಾದವನ್ನು ಅಸಲಾಯಿತು. ದಾಖಲೆಗಳನ್ನು ಪರಿಶೀಲಿಸಲಾಯಿತು.**
**ನನ್ನ ಗಮನಕ್ಕೆ ಬರಬೇಕಾದ ಅಂಶಗಳೇನೆಂದರೆ.**

೧. ವಾದಿ ಹೇಳಿದಂತೆ ನಿಯೋಜಿತ ಪ್ರತಿವಾದಿ ಈ ದಾವೆಯಲ್ಲಿ ಸೂಕ್ತ ಮತ್ತು ಅವಶ್ಯಕ ಪಕ್ಷಗಾರರೇ?

೨.ಯಾವ ಆದೇಶ
ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರಃ
೧.ಸಕಾರಾತ್ಮಕವಾಗಿ.

೨.ಕೆಳಕಂಡಂತೆ

ಃ ಕಾರಣಗಳು ಃ

೧. ವಾದಿ ಹಾಗೂ ನಿಯೋಜಿತ ಪ್ರತಿವಾದಿಗಳಪರ ವಕೀಲರು ತಮ್ಮ ಅರ್ಜಿ ಹಾಗೂ ತಕರಾರಿನ ಅಂಶಗಳನ್ನು ಪುನರಚ್ಚರಿಸುತ್ತಾ ತಮ್ಮ ವಾದ ಮಂಡಿಸಿದ್ದು ಈ ದಾವೆಯ ದಾಖಲೆಗಳನ್ನು ಪರಿಶೀಲಿಸಿದಾಗ ಈದಾವೆಯನ್ನು ವಾದಿ ದಾವಾ ಸ್ವತ್ತಿನಲ್ಲಿ ತನಗೆ $1/7^{th}$ ಭಾಗದ ಹಕ್ಕಿದೆ ಎಂದು ಅದ್ದರಿಂದ ವಿಭಾಗಕ್ಕಾಗಿ ದಾವೆ ಸಲ್ಲಿಸಿರುವುದಾಗಿದೆ ವಾದಿಯ ಪ್ರಕಾರ ನಿಯೋಜಿತ ಪ್ರತಿವಾದಿಯು ದಾವಾ ಸ್ವತ್ತಿನ ಖರೀದಿದಾರರಾಗಿದ್ದು ದಾವೆ ಸಲ್ಲಿಸಿದ ನಂತರ ಅವರು ಅಸ್ತಿಯನ್ನು ಖರೀದಿಸಿರುವುದಾಗಿದೆ. ಇದಕ್ಕೆ ಪೂರಕವಾಗಿ ವಾದಿ ಯಾವುದೇ ದಾಖಲೆಗಳನ್ನು ಸಲ್ಲಿಸದಿದ್ದರೂ ಕೂಡ ನಿಯೋಜಿತ ಪ್ರತಿವಾದಿ ತಮ್ಮ ತಕರಾರಿನಲ್ಲಿ ಈ ವಿಚಾರವನ್ನು

ಅಲ್ಲಗಳೆದಿರುವುದಿಲ್ಲ. ಅವರೇ ಹೇಳುವ ಪ್ರಕಾರ ಅವರು ನ್ಯಾಯೋಚಿತ ಖರೀದಿದಾರರಾಗಿರುತ್ತಾರೆ. ಈ ದಾವೆಯು ವಿಭಾಗ ಹಾಗೂ ಪ್ರತ್ಯೇಕ ಸ್ವಾದೀನತೆಗಾಗಿ ಸಲ್ಲಿಸಿರುವುದರಿಂದ ದಾವೆಯು ತೀರ್ಮಾನವಾಗುವ ಮುಂಚೆ ಅಸ್ತಿಯನ್ನು ಮೂರನೇ ಪಕ್ಷಗಾರರಿಗೆ ಪರಭಾರೆ ಮಾಡಿದರೆ ಅಂತಹ ಖರೀದಿದಾರರು ಮೂಲ ಮಾಲೀಕನ ಸ್ಥಾನದಲ್ಲಿ ಬಂದು ನಿಲ್ಲುತ್ತಾರೆ ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ನಾಳಿನ ದಿನ ದಾವೆಯಲ್ಲಿ ಯಾವುದೇ ಅದೇಶವಾದರೂ ಕೂಡ ಅದು ನೇರವಾಗಿ ಖರೀದಿದಾರರಿಗೆ ಹೋಗಿ ತಟ್ಟುವುದರಿಂದ ನಿಯೋಜಿತ ಪ್ರತಿವಾದಿ ಈ ದಾವೆಯಲ್ಲಿ ಸೂಕ್ತ ಮತ್ತು ಅವಶ್ಯಕ ಪಕ್ಷಗಾರರೆಂದು ಪರಿಗಣಿಸಿ ಒಂದನೇ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

೨.ಕೆಳಕಂಡಂತೆ ಅದೇಶಃ

ಃಆದೇಶಃ

ಮದ್ಯಂತರ ಅರ್ಜಿ 8 ಅದೇಶ 1 ನಿಯಮ 10(2) ಸಿಪಿಸಿ ರಲ್ಲಿಯ ಅರ್ಜಿಯನ್ನು ಪುರಸ್ಕರಿಸಲಾಗಿದೆ. ನಿಯೋಜಿತ ಪ್ರತಿವಾದಿಯನ್ನು 7ನೇ ಪ್ರತಿವಾದಿಯನ್ನಾಗಿ ಸೇರಿಸಲು ಅದೇಶಿಸಲಾಗಿದೆ. ತಿದ್ದುಪಡಿ ಹಾಗೂ ತಿದ್ದುಪಡಿಯಾದ ವಾದಪತ್ರಕ್ಕಾಗಿ ದಿನಾಂಕಃ 03-07-2015 ರಂದು ಕರೆಯಿರಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಪಾವಗಡ.